# ಕನ್ನಡ ಸಾಹಿತ್ಯದಲ್ಲಿ ಬುದ್ಧನ ಪರಿಕಲ್ಪನೆಗಳು

**ಅರುಣ್ ಕುಮಾರ್ ಎ.ವೈ**
ಸಂಶೋಧನಾರ್ಥಿ, ಸಹಾಯಕ
ಸಹಪ್ರಾಧ್ಯಪಕರು,ಕನ್ನಡ
ಜೈನ್ ವಿ.ವಿ. ಬೆಂಗಳೂರು

**ಡಾ.ಶಿವಕುಮಾರಡಿ. ಸಿ**
ಮಾರ್ಗದರ್ಶಕರು, ಪ್ರಾಧ್ಯಪಕರು
ನ್ಯೂ.ಅ.ರಾ.ಪ.ಕಾಲೇಜು.ಬೆಂಗಳೂರು

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಅರುಣ ಕುಮಾರ ಎ.ವೈಡಾ. ಶಿವಕುಮಾರಡಿ ಸಿ. "ಕನನಡ ಸಾಹಿತಯದಲಲಿ ಬುದಧನ ಪರಿಕಲಪನೆಗಳು." *Shanlax International Journal of Arts, Science and Humanities,* vol. 12, no. S1, 2024, pp. 224–26

DOI:
https://doi.org/10.34293/sijash.v12iS1-Oct.8309

**ಪ್ರಸ್ತಾವನೆ**

ಬುದ್ಧನ ಹುಟ್ಟು ಮತ್ತು ಬುದ್ಧನ ಬದುಕು ಮಾನವ ಪ್ರಪಂಚದಲ್ಲಿ ಮಹತ್ವದಅಂಶವಾಗಿದೆ. ಬುದ್ಧನ ತತ್ವಗಳು, ಬುದ್ಧನಜೀವನದರ್ಶನವುಇಡೀ ವಿಶ್ವಕ್ಕೆದೊರಕಿರುವಅತ್ಯಮೂಲ್ಯವಾದದಾಗಿದೆ. ಇಂದು ಬೌದ್ಧಧರ್ಮವನ್ನುಕುರಿತಂತೆ, ಬುದ್ಧನನ್ನು ಒಳಗೊಂಡಂತೆ ಸಂಶೋಧನೆಗಳು, ಅಧ್ಯಯನಗಳು ನಡೆಯುತ್ತಲೆಇದೆ. ಬುದ್ಧನನ್ನುಕುರಿತುಎಲ್ಲಾ ಭಾಷ ಸಾಹಿತ್ಯದಲ್ಲೂಕಾವ್ಯ, ಕಥೆ, ಕಾದಂಬರಿ, ನಾಟಕಗಳು, ರಚನೆಗೊಂಡಿವೆ. ಈ ದಿಸೆಯಲ್ಲಿ ಗಮನಿಸುವಾಗ ಕನ್ನಡ ಸಾಹಿತ್ಯದಲ್ಲಿ ಬುದ್ಧನನ್ನುಕುರಿತಂತೆ ವಿವಿಧ ನೆಲೆಗಟ್ಟಿನಲ್ಲಿ ಮತ್ತು ಬಹು ಆಯಾಮಗಳಲ್ಲಿ ಸಂಶೋಧನೆಗಳು ಅಧ್ಯಯನಗಳು ನಡೆಯುತ್ತಲೆಯಿದೆ. ಇದು ಪ್ರಮುಖವಾಗಿ ವಿಶ್ವ ವಿದ್ಯಾನಿಲಯಗಳಲ್ಲಿ ಸಂಶೋಧನೆಗಳು ಮತ್ತು ಅಧ್ಯಯನಗಳು ನಡೆಯುತ್ತಿರುವುದು ಗಮನಿಸಬೇಕಾದಗಮನಾರ್ಹವಾದ ಸಂಗತಿಯಾಗಿದೆ. ಬುದ್ಧನು ಕಾಲವಾದ ನಂತರವೂ ಅನೇಕ ಬಿಕ್ಕುಗಳು ಬುದ್ಧನ ವಿಚಾರಧಾರೆಗಳನ್ನು ಜಗತ್ತಿನಾದ್ಯಂತ ಸಾರಿದರು. ಇದಕ್ಕೆ ಪೂರಕವಾಗಿ ಅಶೋಕ ಚಕ್ರವರ್ತಿಯನ್ನೆ ನಿದರ್ಶನವಾಗಿ ಹೆಸರಿಸಬಹುದು. ರಾಜನಾದ ಅಶೋಕ ಚಕ್ರವರ್ತಿಯು ಯುದ್ಧನೀತಿಗಳನ್ನು ನಿರಾಕರಿಸುವ ಮೂಲಕ ಅಹಿಂಸೆಗೆ ಹೆಚ್ಚು ಒತ್ತುಕೊಟ್ಟು, ಜೀವಪರವಾದ ಮೌಲ್ಯಗಳನ್ನು ತಳೆದದ್ದು ಬಹಳ ಮಹತ್ವವಾದದ್ದು. ಇಂದು ಬುದ್ಧನಕುರಿತಅಧ್ಯಯನವನ್ನು ಒಳಗೊಂಡಂತೆ ಚರ್ಚೆಗೆ ಒಳಪಡಿಸಿದಾಗ, ಕನ್ನಡ ಸಾಹಿತ್ಯಕ್ಷೇತ್ರವು ಪ್ರಮುಖವಾದ ಪಾತ್ರವನ್ನು ವಹಿಸಿದೆ. ಪ್ರಸ್ತುತ ಈ ಲೇಖನದಲ್ಲಿಕನ್ನಡ ಸಾಹಿತ್ಯದೊಳಗೆ ಬುದ್ಧನ ಪರಿಕಲ್ಪನೆಗಳು ಹೇಗೆ ಒಳಗೊಂಡಿದೆ ಎಂಬುದನ್ನುಅಧ್ಯಯನಕ್ಕೆ ಒಳಪಡಿಸುವುದು ಪ್ರಮುಖಉದ್ದೇಶವಾಗಿದೆ.

**ಮುಖ್ಯಪದಗಳು: ಬುದ್ಧನಕುರಿತ ಕೃತಿಗಳು, ಬುದ್ಧನ ಪರಿಕಲ್ಪನೆಗಳು, ಕನ್ನಡ ಸಾಹಿತ್ಯ,**

## ಪೀಠಿಕೆ

ಭಗವಾನ್ ಬುದ್ಧನಕುರಿತ ಕಥೆಗಳು, ಕಾದಂಬರಿಗಳು, ಲೇಖನಗಳು, ಕಾವ್ಯಗಳು, ನಾಟಕಗಳು, ಹೊಸಬಗೆಯ ಚಿಂತನಾಶೀಲ ಅಂಶಗಳನ್ನು ಒದಗಿಸುತ್ತದೆ. ಈ ಕುರಿತಂತೆ ಭಗವಾನ್ ಬುದ್ಧನನ್ನು ಒಳಗೊಂಡಂತೆ ಬಂದ ಸಾಹಿತ್ಯವೂ ಪ್ರಸ್ತಕ ಸಮಾಜದಲ್ಲಿ ನಡೆಯುತ್ತಿರುವಅಮಾನವೀಯಕಲ್ಪನೆಗಳಿಗೆ ಮಾನವೀಯ ಕಲ್ಪನೆಗಳನ್ನು ಆರೋಗ್ಯಕರವಾಗಿಒದಗಿಸುತ್ತಾಬಂತು. ಈ ಮೂಲಕ ಅಸಮಾನತೆ, ಜಾತಿವ್ಯವಸ್ಥೆ, ಮೌಢ್ಯತೆ, ಲಿಂಗತಾರತಮ್ಯತೆ, ಹಿಂಸೆ, ಇಂತಹ ಹಿಂಸಾತ್ಮಕ ಕೃತ್ಯಗಳಿಗೆ ಹೊರತಾಗಿ ನಿರ್ಭಯ ಸಮಾಜ ಮತ್ತು ಶಾಂತಿ ಸಮಾಜವನ್ನು ನಿರ್ಮಿಸಲು ಬುದ್ಧನಕುರಿತಾದ ವಿಚಾರಧಾರೆಗಳು ಕನ್ನಡ ಸಾಹಿತ್ಯದಲ್ಲಿ ಪೂರಕವಾಗಿರಚನೆಯಾಯಿತುಎಂಬುದನ್ನು ನೆನಪಿಡಬೇಕಿದೆ.

ಅಂದಾನುಕರಣೆಯಲ್ಲೆ ಮುಳುಗಿಹೋಗಿದ್ದ ಸಮಾಜವೂ, ಬುದ್ಧನ ಚಿಂತನೆಗಳನ್ನು ಅನುಸರಿಸಿದ ಸಂದರ್ಭದಲ್ಲಿ ಚೇತರಿಸಿಕೊಳ್ಳಲು ಸಾಧ್ಯವಾಯಿತು. ವೈದಿಕ ಪರಂಪರೆಯಿಂದ ರೋಸಿಹೋದ ಸಮಾಜಕ್ಕೆ ಬುದ್ಧನಜೀವನ ಮೌಲ್ಯಗಳು, ತತ್ವಾದರ್ಶಗಳು ಮಾನವನ ಬದುಕಿನಲ್ಲಿ ಬೆರೆತುಹೋಯಿತುಎಂಬುದನ್ನು ಮರೆಯುವಂತಿಲ್ಲ. ಈ ಕಾರಣಕ್ಕಾಗಿ ಬುದ್ಧನ ವಿಚಾರಧಾರೆಗಳು, ತತ್ವಾದರ್ಶಗಳು ಎಲ್ಲಾಕಾಲದಆದರ್ಶ ಸಮಾಜಕ್ಕೆ ಪ್ರಸ್ತುತವಾದುದುಎಂಬುದನ್ನುಅಧ್ಯಯನದ ಮುಖೇನ ಅರಿತುಇದನ್ನುಚರ್ಚೆಗೆ ಒಳಪಡಿಸುವ

ಅನಿವಾರ್ಯತೆಇದೆಎಂಬುದನ್ನು ತಿಳಿಯಲಾಗಿದೆ. ಈ ಲೇಖನದಲ್ಲಿಕನ್ನಡ ಸಾಹಿತ್ಯವನ್ನು ಒಳಗೊಂಡಂತೆ ಬುದ್ಧನ ಪರಿಕಲ್ಪನೆಗಳನ್ನು ಅಧ್ಯಯನಮಾಡಲಾಗಿದೆ.

ವಿಧಾನ: ಕನ್ನಡದಆಧುನಿಕತೆಯ ಸಂದರ್ಭದಲ್ಲಿ ಬುದ್ಧನಕುರಿತು ಬಂದ ಸಾಹಿತ್ಯ ಕೃತಿಗಳನ್ನು ಮುಖ್ಯವಾಗಿರಿಸಿಕೊಂಡು, ಅಧ್ಯಯನ ನಡೆಸುವುದರಜೊತೆಗೆ ವಿಭಿನ್ನ ಆಯಾಮಗಳಲ್ಲಿ ಚರ್ಚೆಗೆ ಒಳಪಡಿಸುವುದು. ಚರ್ಚೆಗೆ ಒಳಪಡಿಸಿದ ಅಂಶಗಳನ್ನು ವಿಶ್ಲೇಷಣಾತ್ಮಕವಾಗಿಅರಿಯುವುದರ ಮೂಲಕ ಬುದ್ಧನಕುರಿತ ಕೃತಿಗಳಲ್ಲಿ ಬುದ್ಧನ ಪರಿಕಲ್ಪನೆಗಳು ಹೇಗೆ ಮೂಡಿ ಬಂದಿದೆಎಂಬುದನ್ನು ಗಮನದಲ್ಲಿರಿಸಿಕೊಂಡು ಈ ಲೇಖನದಲ್ಲಿಚರ್ಚಿಸಲಾಗಿದೆ.

**ಕನ್ನಡ ಸಾಹಿತ್ಯ ಮತ್ತು ಬುದ್ಧನ ಪರಿಕಲ್ಪನೆಗಳು**

ಬುದ್ಧನಕುರಿತಾದ ಸಾಹಿತ್ಯವನ್ನು ಸುಮಾರು 19ನೇ ಶತಮಾನದ ನಂತರದದಲ್ಲಿಕಾಣಬಹುದು. ಆಧುನಿಕತೆಯ ಸಂದರ್ಭದಲ್ಲಿ ಭಾಷಾಂತರ, ಅನುವಾದದ ಮೂಲಕ ಕನ್ನಡ ಸಾಹಿತ್ಯದಲ್ಲಿ ಬುದ್ಧನಕುರಿತಾದ ಸಾಹಿತ್ಯವೂ ಕಾಣಿಸಿಕೊಂಡಿತು. ಪಾಲಿ ಭಾಷೆಯಲ್ಲಿದ್ದ ಬುದ್ಧನ ವಿಚಾರಗಳು ಕನ್ನಡಕ್ಕೆಅನುವಾದರೂಪದಲ್ಲಿ ಬಂದಿತು. ಇದಕ್ಕೆ ಮುಖ್ಯವಾಗಿ 19ನೇ ಶತಮಾನದಲ್ಲಿ "ಅಶ್ವಘೋಷನ ಬುದ್ಧಚರಿತೆ"ಯನ್ನುಇಲ್ಲಿ ಹೆಸರಿಸಬಹುದಾಗಿದೆ.

ಎಂ.ಗೋವಿಂದ ಪೈ ರವರುಕನ್ನಡದಲ್ಲಿ ಬುದ್ಧನಕುರಿತಾದ ಸಾಹಿತ್ಯವನ್ನು ನೀಡಿದ್ದು ಶ್ಲಾಘನೀಯವಾದ ಸಂಗತಿ. ಪಾಲಿಭಾಷೆಯನ್ನುಅಧ್ಯಯನವನ್ನು ನಡೆಸಿ ಪಾಲಿಭಾಷೆಯನ್ನು ಅರ್ಥೈಸಿಕೊಳ್ಳುವಷ್ಟು ಜಾಣ್ಮೆ ಮತ್ತುಕೌಶಲ್ಯಹೊಂದಿದ್ದಗೋವಿಂದ ಪೈ ರವರಿಗೆಕನ್ನಡದಲ್ಲಿ ಬುದ್ಧನಕುರಿತ ಕೃತಿಗಳನ್ನು ಮತ್ತು ಲೇಖನಗಳನ್ನು ನೀಡಿದ್ದು ಮುಖ್ಯವಾದದ್ದು. ಗೋವಿಂದ ಪೈ ರವರು ವೈಶಾಖಿ ಖಂಡಕಾವ್ಯ ಬರೆಯುವ ಮುಂಚೆಯೆ ಬುದ್ಧನಕುರಿತಾದಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರು ಎಂಬುದನ್ನು ಅಧ್ಯಯನಗಳ ಮೂಲಕ ತಿಳಿಯಲಾಗಿದೆ. ಇದಕ್ಕೆ ಆಧರಿಸಿಕೊಂಡಂತೆ ಪಾಲಿಭಾಷೆಯನ್ನು ಅರ್ಥೈಸಿಕೊಳ್ಳುವ ಜಾಣ್ಮೆಯನ್ನು ಹೊಂದಿದ್ದಗೋವಿಂದ ಪೈ ರವರು ಅನುವಾದಿಸಿದ್ದಾರೆಂಬುದನ್ನು "ಕನ್ನಡದಲ್ಲಿ ಬುದ್ಧ ಚರಿತೆಗಳ ಸಾಂಸ್ಕೃತಿಕಅಧ್ಯಯನ– ಬಬ್ರುವಾಹನಅಂಬಾರಾಯ"ಎಂಬುವವರ ಮಹಾಪ್ರಬಂಧದಲ್ಲಿ ಚರ್ಚಿಸಿರುವುದು ಕಾಣಬಹುದು.

ಗೋವಿಂದ ಪೈ ರವರು ಬುದ್ಧನಕುರಿತಾದ " ವೈಶಾಖಿ" ಖಂಡಕಾವ್ಯವೂ ಬುದ್ಧನಕೊನೆಯ ದಿನಗಳನ್ನು ಚಿತ್ರಿಸುವಗ್ರಂಥವಾದರು, ಬುದ್ಧನ ವಿಚಾರಧಾರೆಗಳನ್ನು ಈ ಕೃತಿತೆರೆದಿಡುತ್ತದೆ. ಇದೊಂದುಕನ್ನಡ ಸಾಹಿತ್ಯದಲ್ಲಿರಚನೆಗೊಂಡಖಂಡಕಾವ್ಯವಾದರೂ ವಸ್ತು, ಕಾವ್ಯಚಿತ್ರಣ,ಬುದ್ಧನಕುರಿತ ವರ್ಣನೆ, ಈ ಎಲ್ಲಾದೃಷ್ಟಿಕೋನದಿಂದಇದೊಂದು ಬೌದ್ಧಕಾವ್ಯವೇಎಂಬುದುಕಂಡಬರುತ್ತದೆ. ಬೌದ್ಧಧರ್ಮ ಬೌದ್ಧ ಸಾಹಿತ್ಯದ ಬಗ್ಗೆ ಅರಿವಿದ್ದಗೋವಿಂದ ಪೈ ರವರಿಗೆಇಂತಹದ್ದೊಂದುಅದ್ಭುತಕೃತಿಕನ್ನಡದಲ್ಲಿ ಹುಟ್ಟಲುಕಾರಣವಾಯಿತು ಎಂಬ ನಿರ್ಧಾರಕ್ಕೆ ಬರಬಹುದೆಂಬುದನ್ನು ಈ ಮೇಲಿನ ಅಂಶಗಳಿಂದ ತಿಳಿಯಲಾಗಿದೆ.

ಬುದ್ಧನಕುರಿತಅಥವಾ ಬೌದ್ಧ ಸಾಹಿತ್ಯವೂಕನ್ನಡಕ್ಕೆಅನುವಾದ, ಭಾಷಾಂತರ, ಮಾಡುವ ಮತ್ತು ಅವುಗಳನ್ನು ಕನ್ನಡ ಸಾಹಿತ್ಯಕ್ಕೆ ಒಗ್ಗಿಸುವ ಕೆಲಸದಲ್ಲಿ ಜಿ.ಪಿ. ರಾಜರತ್ನಂರವರಕಾಯಕವು ಲೋಕೊತ್ತರವಾದದ್ದು. ರಾಜರತ್ನಂರವರು ಬೌದ್ಧ ಸಾಹಿತ್ಯವನ್ನುಕನ್ನಡ ಸಾಹಿತ್ಯದಲ್ಲಿ ಕನ್ನಡಿಕರಿಸಿರುವುದಕ್ಕೆ ಅವರ ಅನೇಕ ಕೃತಿಗಳೆ ನಿದರ್ಶನಗಳಾಗಿವೆ. ಬುದ್ಧ ಚರಿತೆಗಳನ್ನು ಕನ್ನಡಕ್ಕೆ ನೀಡಿದ್ದು ಬುದ್ಧನಕುರಿತ ಸಾಹಿತ್ಯವನ್ನುಅಧ್ಯಯನ ಮಾಡುವವರಿಗೆಅನುಕೂಲಕರವಾಗಿವೆ. ಪಾಲಿ ಭಾಷೆಯನ್ನು ಓದಿ ಅರ್ಥೈಸಿಕೊಂಡ ರಾಜರತ್ನಂರವರುಕನ್ನಡ ಸಾಹಿತ್ಯದಲ್ಲಿ " ಬುದ್ಧನ ವಚನ ಪರಿಚಯ" "ಮೂರು ಪಾಲಿಸೂತ್ರಗಳು" "ಬುದ್ಧನ ಕಥೆಗಳು" "ವೈಶಾಖ ಶುಕ್ಲ ಪೂರ್ಣಿಮ" ಎಂಬ ಕೃತಿಗಳು ರಚನೆಗೊಳ್ಳಲು ಕಾರಣವಾಯಿತು.

ರಾಜರತ್ನಂರವರು ಪಾಲಿಭಾಷೆಯಿಂದಕನ್ನಡಕ್ಕೆಅನುವಾದ ಕೃತಿಗಳು ಬುದ್ಧನ ವಿಚಾರಧಾರೆಗಳನ್ನು ಒಳಗೊಂಡಂತೆ ಸಂಶೋಧನೆ ನಡೆಸುವವರಿಗೆಇಂದು ಹೆಚ್ಚು ಪೂರಕವಾಗಿದೆ. ಈ ಮೂಲಕ "ವೈಶಾಖ ಶುಕ್ಲ ಪೂರ್ಣಿಮ" ಕೃತಿಯು ವಿಶಿಷ್ಟವಾದದ್ದು ಈ ಕೃತಿಯಲ್ಲಿ ಕುವೆಂಪು, ಮಾಸ್ತಿ, ವಿ. ಸೀತಾರಾಮಯ್ಯ, ನವರ ಬುದ್ಧನಕುರಿತಾದ ಕಾವ್ಯಗಳು ಹೆಚ್ಚು ಮಹತ್ವ ಪೂರ್ಣವಾಗಿರುವುದನ್ನುಕಾಣಬಹುದು. ಒಂದೆಡೆಯೆಕನ್ನಡಕಾವ್ಯಲೋಕದಲ್ಲಿ ಬುದ್ಧ ಪ್ರವೇಶಗೊಂಡದ್ದು ಮತ್ತು ಬುದ್ಧನಜೀವನ ಮತ್ತು ಸಾಧನೆಗಳನ್ನು ಕುರಿತಂತೆ ಈ ಕಾವ್ಯಗಳು ಮಾತನಾಡುತ್ತವೆ.ಎಲ್ ಬಸವರಾಜರವರಿಂದರಚಿತಗೊಂಡ ಸೌಂದರಾನಂದಕೃತಿಯು ಬುದ್ಧನಕುರಿತ ಮಹತ್ವದಕೃತಿಯಾಗಿದೆ.

ಡಾ. ಬಿ. ಆರ್ ಅಂಬೇಡ್ಕರ್‌ರವರ ಬುದ್ಧ ಮತ್ತುಆತನಧಮ್ಮಎಂಬ ಕೃತಿಯೂಡಾ. ಜಗದೀಶಕೊಪ್ಪಎಂಬುವವರುಕನ್ನಡಕ್ಕೆ ಅನುವಾದಿಸಿರುವುದು ಮುಖ್ಯವಾದದ್ದಾಗಿದೆ. ಈ ಕೃತಿಯೂ ಬುದ್ಧನಜೀವನ, ವೈರಾಗ್ಯ, ಸಾಧನೆಗಳು, ಮತ್ತು ಬುದ್ಧನು ನಿರ್ವಾಣ, ಹೊಂದುವ ವರೆಗೂ ಅನೇಕ ಮಾಹಿತಿಯನ್ನು ಈ ಕೃತಿಯೂತೆರೆದಿಡುತ್ತದೆ. ಬುದ್ಧಆತನಧಮ್ಮ ಈ ಕೃತಿಯೂ ಮುಖ್ಯವಾಗಿಆರನೆ ಶತಮಾನದಲ್ಲಿ ಜನಿಸಿದ ಗೌತಮಬುದ್ಧನಕುರಿತುಒಂದು ಕಾಲಮಾನದಚರಿತ್ರೆಯನ್ನೆ ಒಳಗೊಂಡ ಅಂಶಗಳನ್ನು ಕೊಟ್ಟಿದೆ. ಬದಲಾಗಿ ಇಂದಿನ ಆಧುನಿಕತೆ, ಮತ್ತುಜಾಗತೀಕರಣ, ಸಂದರ್ಭದಲ್ಲಿ ಎದುರುಗೊಳ್ಳುವ ಅನೇಕ ಅಮಾನವೀಯ ಕಲ್ಪನೆಗಳಿಗೆ ಮಾನವೀಯಕಲ್ಪನೆಯ ಬೆಳಕನ್ನು ಈ ಕೃತಿಯೂಚೆಲ್ಲುತ್ತದೆ. ಅಧ್ಯಯನದ ಸಂದರ್ಭದಲ್ಲಿ ಬುದ್ಧನಕುರಿತಂತೆಸಂಶೋಧನೆಗಳನ್ನು ಕೈಗೊಳ್ಳುವ ಅಧ್ಯಯನಕಾರರಿಗೆ ಅನೇಕ ಚಾರಿತ್ರಿಕ ಅಂಶಗಳನ್ನು ಈ ಕೃತಿಯೂಒದಗಿಸುತ್ತದೆ.

ಆಧುನಿಕತೆಯ ಸಂದರ್ಭದಲ್ಲಿಕನ್ನಡದ ನಾಟಕ ಪ್ರಕಾರವೂ ಬುದ್ಧನಕುರಿತಾದ ಅನೇಕ ನಾಟಕಗಳು ಕನ್ನಡದಲ್ಲಿರುವುದು ಮಹತ್ತರವಾದ ಸಂಗತಿ ಈ ಮೂಲಕ ಕನ್ನಡದ ನವೋದಯ ಸಂದರ್ಭದಿಂದಿಡಿದು ಪ್ರಸ್ತುತ ನವನವ್ಯೋತ್ತರ ಸಂದರ್ಭದಲ್ಲಿ ಬುದ್ಧನಕುರಿತಾದ ಅನೇಕ ನಾಟಕಗಳಿವೆ. ನವೋದಯಕಾಲಘಟ್ಟದಲ್ಲಿರಚನೆಗೊಂಡಕುವೆಂಪುರವರ ಮಹಾರಾತ್ರಿನಾಟಕವೂ ಸಿದ್ಧಾರ್ಥನು ಬುದ್ಧನಾಗುವರಾತ್ರಿಯಕುರಿತಂತಚಾರಿತ್ರಿಕಅಂಶವನ್ನು ಒಳಗೊಂಡಿದೆ. ಮಾಸ್ತಿವೆಂಕಟೇಶ ಅಯ್ಯಾಂಗಾರ್‌ರವರಯಶೋಧರ ನಾಟಕದಲ್ಲಿಯಶೋಧರೆಯ ಸಂಕಟ ಮುಖ್ಯವಾಗಿಕಂಡುಬಂದರು ಬುದ್ಧನ ವಿಚಾರಧಾರೆಗಳನ್ನು ಈ ಕೃತಿಯುಕಟ್ಟಿಕೊಡುತ್ತದೆ.ಪ್ರ

ಭುಶಂಕರರ ಬುದ್ಧನಕುರಿತಾದ ನಾಟಕಗಳು ಹೆಚ್ಚು ಮಹತ್ವ ಉಳ್ಳದ್ದು ಬುದ್ಧನ ಸಮಕಾಲೀನ ಬಿಕ್ಕುಗಳ ಕುರಿತಂತೆ ಪ್ರಭುಶಂಕರರ ನಾಟಕಗಳನ್ನು ಮನಗಾಣಬಹುದುಆಮ್ರಪಾಲಿ, ಅಂಗುಲಿಮಾಲ, ಸುಜಾತ, ಗಾಳಿ ಎಂಬ ಕುದುರೆಏರಿ, ಇವರ ಪ್ರಮುಖ ನಾಟಕಗಳು, ಶಿವರಾಮ ಕಾರಂತರಕಿಸಾಗೋತಮಿ ನಾಟಕವೂ ಹುಟ್ಟು ಮತ್ತು ಸಾವಿನ ಸತ್ಯಾಂಶಗಳನ್ನು ವೈಜ್ಞಾನಿಕವಾಗಿಚಿತ್ರಿಸುತ್ತದೆ. ಜಿ.ಎಸ್ ಮಾವಿನ ಕುಳ್ಳಿಯವರ ರೂಪಾಂತರ ನಾಟಕವೂ ಬುದ್ಧನ ಚಿಂತನಾಶೀಲ ವಿಚಾರಧಾರೆಗಳನ್ನು ರಂಗರೂಪದಿಂದಲೆ ಸಮಾಜವನ್ನುತಲುಪುವ ಮಹತ್ತರವಾದ ಅಂಶಗಳನ್ನು ಒಳಗೊಂಡಿದೆ. ಲೋಕೇಶ ಅಗಸನ ಕಟ್ಟೆಯವರ ನಮ್ಮೆಲ್ಲರ ಬುದ್ಧ ನಾಟಕವೂ ಬುದ್ಧನ ಪಂಚಶೀಲ ಅಂಶಗಳನ್ನು ಮತ್ತುಅಷ್ಟಾಂಗಮಾರ್ಗದ ಪರಿಕಲ್ಪನೆಯನ್ನು ಒಳಗೊಂಡ ಕೃತಿ.

ಇತ್ತೀಚಿನ ದಿನಮಾನದಲ್ಲಿ ಬುದ್ಧನಕುರಿತ ಸಾಹಿತ್ಯವನ್ನು ಪಾಲಿ ಭಾಷೆಯಿಂದಕನ್ನಡಕ್ಕೆಅನುವಾದವನ್ನು ಅನೇಕ ಬೋಧಿ ಟ್ರಸ್ಟ್‌ಗಳು ಈ ಕೆಲಸವನ್ನು ಮಾಡುತ್ತಿವೆ. ಇದಕ್ಕೆ ಪೂರಕವಾಗಿ ಬುದ್ಧನ ವಚನ ಟ್ರಸ್ಟ್ ಬೆಂಗಳೂರು ಈ ಸೊಸೈಟಿಯ ಮೂಲಕ ಶ್ರೀರಂಗರಾಜು ಎನ್ನುವವರು ಬುದ್ಧನ ತ್ರಿಪಿಟಕಗಳಾದ "ಸುತ್ತಪಿಟಕ" ಮತ್ತು "ದೀಘನಿಕಾಯವನ್ನು" ಪಾಲಿಭಾಷೆಯಿಂದಕನ್ನಡಕ್ಕೆ ಅನುವಾದಿಸಿರುವುದು ಮೂರುಸಂಪುಟಗಳಲ್ಲಿವೆ. ಇನ್ನುಇತ್ತಿಚೆಗೆ ಬೌದ್ಧ ಸಾಹಿತ್ಯವನ್ನುಕುರಿತಂತೆಕನ್ನಡದಲ್ಲಿ ಸ್ವಂತಂತ್ರ ಕೃತಿಗಳು ಹೊರ ಬಂದಿರುವುದು ಪ್ರಮುಖವಾದ ಸಂಗತಿಯಾಗಿದೆ. ನಟರಾಜು ಬೂದಾಳು ಕನ್ನಡದ ಪ್ರಮುಖ ಲೇಖಕರಾಗಿದ್ದು ಬುದ್ಧನಕುರಿತಂತೆ ಬುದ್ಧನ ವಚನಗಳನ್ನು ಮತ್ತು ಸರಹಪಾದ, ನಾಗರ್ಜುನನ್ನು, ಕುರಿತಂತೆ ಬಹಳ ದೀರ್ಘವಾದಅಧ್ಯಯನವನ್ನು ನಡೆಸಿ ಕನ್ನಡಕ್ಕೆಕೊಟ್ಟಿರುವುದು ಮುಖ್ಯವಾದದ್ದು. ನಟರಾಜು ಬೂದಳು ರವರು ಬುದ್ಧನಕುರಿತಂತೆಅಧ್ಯಯನನಡೆಸಿದವರಲ್ಲಿ ಬಾಳ ಪ್ರಮುಖರುತಾವುಕಂಡ ಬುದ್ಧನನ್ನುಕನ್ನಡ ಸಾಹಿತ್ಯದ ಮುಖೇನ ನೀಡುವುದರಜೊತೆಗೆ ಬುದ್ಧನ ವಿಚಾರಗಳನ್ನು ಭಾರತೀಯ ಸಮಾಜಕ್ಕೆ ನೀಡಿರುವುದು ಬಾಳ ಮುಖ್ಯವಾದದ್ದಾಗಿದೆ.

**ಉಪಸಂಹಾರ**

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಾವಿರಾರು ವರ್ಷಗಳ ಇತಿಹಾಸವಿರುವಕನ್ನಡ ಸಾಹಿತ್ಯವೂ ಮಾನವೀಯ ಪರಿಕಲ್ಪನೆಗಳನ್ನು ಪ್ರಾಚೀನ ಸಾಹಿತ್ಯದಿಂದ ಹಿಡಿದುಜನಪದ ಸಾಹಿತ್ಯದವರೆಗೂಇಂತಹ ಮಹತ್ತರವಾದ ಅಂಶಗಳನ್ನು ಒಳಗೊಂಡಿದೆ. ಇದಕ್ಕೆ ಪ್ರಮುಖವಾಗಿ ಹನ್ನೆರಡನೆ ಶತಮಾನದ ಬಸವಣ್ಣನನ್ನು ಮತ್ತುಆರನೆ ಶತಮಾನದಲ್ಲಿ ಜೀವಿಸಿದ್ದ ಬುದ್ಧನನ್ನುಕುರಿತಕನ್ನಡ ಸಾಹಿತ್ಯದಲ್ಲಿರಚನೆಗೊಂಡ ಅನೇಕ ಕೃತಿಗಳನ್ನು ಈ ಲೇಖನದ ವಿಶ್ಲೇಷಣೆಯಲ್ಲಿ ಒಳಗೊಂಡಿದೆ.ಹಾಗಾಗಿ ಪ್ರಸ್ತುತ ಈ ಲೇಖನವೂ ಬುದ್ಧನನ್ನುಕುರಿತಂತೆಕನ್ನಡ ಸಾಹಿತ್ಯದಲ್ಲಿ ಬಂದ ಕೃತಿಗಳನ್ನು ಅವಲೋಕನ ಮಾಡುವ ಮೂಲಕ ಬುದ್ಧನ ಪರಿಕಲ್ಪನೆಗಳನ್ನು ಹುಡುಕಾಟವನ್ನು ನಡೆಸಿರುವುದು ಇಲ್ಲಿನ ಮುಖ್ಯಾಂಶವಾಗಿದೆ.

ಪಾಲಿಭಾಷೆಯಲ್ಲಿರುವ ಅನೇಕ ಕೃತಿಗಳನ್ನು ಅಧ್ಯಯನ ಮಾಡುವುದರ ಮುಖೇನ ಅನೇಕ ವಿದ್ವಾಂಸರು ಬುದ್ಧನ ವಿಚಾರ ಧಾರೆಗಳನ್ನು ಕನ್ನಡಕ್ಕೆ ನೀಡಿದರು. ಬೌದ್ಧ ಧರ್ಮಗ್ರಂಥಗಳಾದ ತ್ರಿಪಿಟಕಗಳು ಪಾಲಿಭಾಷೆಯಿಂದಕನ್ನಡಕ್ಕೆ ಬಂದವು. ಸುಮಾರು 19 ಮತ್ತು 20 ನೇ ಶತಮಾನದಲ್ಲಿ ಜೀವಿಸಿದ್ದ ಅನೇಕ ವಿದ್ವಾಂಸರುಉದಾ: ಜಿ.ಪಿ ರಾಜರತ್ನಂ, ಕೋಸಂಬಿ, ಗೋವಿಂದ ಪೈ, ಮುಂತಾದ ಲೇಖಕರು ಪಾಲಿ ಭಾಷೆಯನ್ನುಅಧ್ಯಯನಕ್ಕೆ ಒಳಪಡಿಸಿದರು. ಕಾಲಾಂತರದಲ್ಲಿಅಧ್ಯಯನದ ಮೂಲಕ ಬುದ್ಧನಕುರಿತಾದಕಥೆ, ಕಾವ್ಯ, ಕಾದಂಬರಿ, ನಾಟಕಗಳು ಕನ್ನಡಕ್ಕೆ ಸ್ವತಂತ್ರವಾಗಿರಚನೆಗೊಂಡು ಮಾನವ ಸಮಾಜಕ್ಕೆತಲುಪಿದವು.ಒಟ್ಟಾರೆಯಾಗಿ ಈ ಲೇಖನವು ಬುದ್ಧನನ್ನುಕುರಿತಂತೆಕನ್ನಡ ಸಾಹಿತ್ಯದಲ್ಲಿ ಬುದ್ಧನ ಬಗೆಗಿನ ಇರುವ ಕೃತಿಗಳು ಮತ್ತು ಬುದ್ಧನ ಬಗೆಗಿರುವ ಪರಿಕಲ್ಪನೆಗಳನ್ನು ಒಳಗೊಂಡಿದೆ.

**ಪರಾಮರ್ಶನ ಗ್ರಂಥಗಳು**


1. ವೈಶಾಖ ಶುಕ್ಲಪೂರ್ಣಿಮ,ಜಿ.ಪಿ ರಾಜರತ್ನಂ.ಶಾಕ್ಯ ಸಾಹಿತ್ಯ ಮಂಟಪ ಬೆಂಗಳೂರು, 1940
2. ಕನ್ನಡ ಸಾಹಿತ್ಯ ಸಂಸ್ಕೃತಿಕೋಶ:ಡಾ. ಚಿ. ಸಿ. ನಿಂಗಣ್ಣ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ, 2017
3. ಬಹುತ್ವದ ಭಾರತ ಮತ್ತು ಬೌದ್ಧತಾತ್ವಿಕತೆ–ಡಾ. ಮೂಡ್ನಕೂಡುಚಿನ್ನಸ್ವಾಮಿ, ಲಡಾಯಿ ಪ್ರಕಾಶನ ಗದಗ, 2018
4. ಬುದ್ಧ ಮತ್ತುಆತನದಮ್ಮ – (ಅನು) ಡಾ. ಎನ್‌ಜಗದೀಶಕೊಪ್ಪ, ಪಾಲಿಇನ್ಸ್‌ಟ್ಯೂಟ್ ಕಲಬುಗಿ, 2022
5. ಆಧುನಿಕ ಕನ್ನಡ ನಾಟಕ – ಡಾ. ಕೆ. ಮರುಳಸಿದ್ದಪ್ಪ, ಅಂಕಿತ ಪುಸ್ತಕ ಬೆಂಗಳೂರು, 2013
6. ಭಾರತ ದರ್ಶನ ಭಾಗ:1 – ಜವಹರ್ ಲಾಲ್ ನೆಹರು (ಅನು: ಎಸ್.ವಿ. ಕೃಷ್ಣಮೂರ್ತಿರಾವ್) ಕರ್ನಾಟಕಅನುವಾದ ಸಾಹಿತ್ಯಅಕಾಡೆಮಿ ಬೆಂಗಳೂರು, 2007
7. ಬುದ್ಧ ಧಮ್ಮದರ್ಶನ – ವೈ.ಬಿ. ನಂದನ – ಬುದ್ಧ ವಚನ ಟ್ರಸ್ಟ್ ಬೆಂಗಳೂರು, 2006
8. ಮಹಾ ಬೌದ್ಧ ವಿಷಯ ವಿಶ್ವಕೋಶ ನಿಘಂಟು– ಬಿ. ಎನ್ ಶ್ರೀನಿವಾಸನ್, ಆರ್.ಶೇಷ ಶಾಸ್ತ್ರೀ,ಸನ್ನಿಧಿ ಪ್ರಕಾಶನ ಬೆಂಗಳೂರು, 2020
9. ಕನ್ನಡದಲ್ಲಿ ಬುದ್ಧಚರಿತೆಗಳ ಸಾಂಸ್ಕೃತಿಕಅಧ್ಯಯನ(ಮಹಾಪ್ರಬಂಧ)– ಬಬ್ರುವಾಹನಅಂಬಾರಾಯ, ಗುಲಬರ್ಗಾ ವಿ.ವಿ., ಕಲಬುರಗಿ, 2022